# ಹೊಸತು






## ಡಿಸ್ನಿಯಿಂದ ಟ್ರೆಂಡಿ ಟಿ ಶರ್ಟ್

ಮಕ್ಕಳ ಅಚ್ಚುಮೆಚ್ಚಿನ ಡಿಸ್ನಿ ಬ್ರ್ಯಾಂಡ್ ಇದೀಗ ಮಕ್ಕಳಿಗಾಗಿ ಟ್ರೆಂಡಿ ಟಿ ಶರ್ಟ್‌ಗಳನ್ನು ಬಿಡುಗಡೆ ಮಾಡಿದೆ. ಇದರ ಜತೆಯಾಗಿ ಮಾರ್ವೆಲ್ ಕಂಪೆನಿ ಕೂಡ ಯುವಕರಿಗಾಗಿ ಇದೇ ರೀತಿಯ ಟ್ರೆಂಡಿ ಟಿ ಶರ್ಟ್ ಅನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಮಕ್ಕಳ ಕನಸಿನ ಸೂಪರ್ ಹೀರೊಗಳಾದ ಐರನ್ ಮ್ಯಾನ್, ಸ್ಪೈಡರ್‌ಮ್ಯಾನ್, ಅವೆಂಜರ್ಸ್, ಮಿಕ್ಕಿ ಮೌಸ್ ಮುಂತಾದ ಸುಂದರ ಪ್ರಿಂಟ್ ಗಳಿರುವ ಟಿ ಶರ್ಟ್‌ಗಳು ಇದೀಗ ಹೊಸದಾಗಿ ಬಂದಿದೆ.

ಬೆಲೆ ₹ 499.

ವಿವರಕ್ಕೆ: 9867127224



## ರೂಷ್ ಪರ್ಸ್, ಶೂ..



ವಿದೇಶಿ ಮೂಲದ ರೂಷ್ ಕಂಪೆನಿ ಇದೀಗ ಹೊಸ ಬಗೆಯ ಶೂ, ಪರ್ಸ್ ಮುಂತಾದ ಉತ್ಪನ್ನಗಳನ್ನು ಮಾರುಕಟ್ಟೆಗೆ ತಂದಿದೆ. ಶೂ ನಲ್ಲಿ 25 ವೈವಿಧ್ಯಗಳಿದ್ದು 16 ವಿವಿಧ ಬಣ್ಣಗಳಲ್ಲಿ ಸಿಗುತ್ತದೆ. ಕೆಲಸಕ್ಕೆ ತೆರಳುವಾಗ ಬಳಸಲು, ಕ್ಯಾಷುವಲ್, ಮದುವೆ ಮುಂತಾದ ಶುಭ ಸಮಾರಂಭಗಳಿಗೆ, ಕ್ಲಬ್, ಪಾರ್ಟಿಗೆ ಹೋಗುವಾಗ ಧರಿಸಲು ಪ್ರತ್ಯೇಕ ವಿನ್ಯಾಸಗಳಲ್ಲಿ ಲಭ್ಯ. ಉತ್ತಮ ಗುಣಮಟ್ಟದ್ದಾಗಿದ್ದು, ದೀರ್ಘ ಕಾಲ ಬಾಳಿಕೆ ಬರುತ್ತದೆ. ಬೆಲೆ ₹ 4,449. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ.

ವಿವರಕ್ಕೆ: 080 67266472




## ಗೋದ್ರೆಜ್‌ನಿಂದ ಸೇಫ್ ಲಾಕರ್

ಸಮಗ್ರ ಭದ್ರತಾ ಪರಿಹಾರಗಳನ್ನು ಒದಗಿಸುವ ಕಂಪೆನಿಗಳಲ್ಲಿ ಒಂದಾದ ಗೋದ್ರೆಜ್ ಸೆಕ್ಯುರಿಟಿ ಸೊಲ್ಯೂಷನ್ಸ್ ಇದೀಗ 'ಮ್ಯಾಟ್ರಿಕ್ಸ್ ಸೇಫ್ ವಿದ್ ಐ-ವಾರ್ನ್' ಎಂಬ ಹೊಸ ಉತ್ಪನ್ನವೊಂದನ್ನು ಬಿಡುಗಡೆ ಮಾಡಿದೆ. ಇದು ಸೇಫ್ ಲಾಕರ್ ಆಗಿದ್ದು, ಇನ್‌ಬಿಲ್ಟ್ ವೈಬ್ರೇಷನ್ ಸೆನ್ಸರ್ ಹೊಂದಿದೆ. ಯಾರಾದರೂ ಸೇಫ್ ಲಾಕರ್ ಅನ್ನು ಮುರಿಯಲು ಯತ್ನಿಸಿದರೆ ಅಲಾರಾಂ ಹೊರಡಿಸುತ್ತದೆ. ಅದೇ ವೇಳೆ ಧ್ವನಿಮುದ್ರಿತ ಸಂದೇಶಗಳನ್ನು ಮತ್ತು ಸ್ವಯಂಚಾಲಿತ ಎಸ್‌ಎಂಎಸ್‌ಅನ್ನು ಮೊದಲೇ ನಿಗದಿ ಮಾಡಿರುವ ಫೋನ್ ನಂಬರ್‌ಗಳಿಗೆ ಕಳುಹಿಸುತ್ತದೆ.

ಈ ಅತ್ಯಾಧುನಿಕ ತಂತ್ರಜ್ಞಾನದಿಂದ ಮಾಡಿದ ಸೇಫ್ ಲಾಕರ್ ಅತ್ಯಮೂಲ್ಯ ವಸ್ತುಗಳಿಗೆ ಸಂಪೂರ್ಣ ಭದ್ರತೆ ಒದಗಿಸುತ್ತದೆ ಎನ್ನುವುದು ಕಂಪೆನಿ ವಿವರಣೆ.

ಈ ಸೇಫ್ ಲಾಕರ್, ಕಳ್ಳತನದ ಸಂದರ್ಭದಲ್ಲಿ ಮಾಲಕರಿಗೆ ಎಚ್ಚರಿಕೆ ಸೂಚನೆ ಕಳುಹಿಸುವ ಮೂಲಕ ಸಕಾಲದಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಅನುವು ಮಾಡಿಕೊಡುತ್ತದೆ. ಹೆಚ್ಚುವರಿಯಾಗಿ ಇದು ಅಲರಾಂ ಮೊಳಗಿಸುವ ಮೂಲಕ ಕಳ್ಳರನ್ನು ತಡೆಯುವಲ್ಲಿ ಸಹಕಾರಿಯಾಗಿದೆ.

ಎಲ್ಲ ಗೋದ್ರೆಜ್ ಶೋರೂಂ ಮತ್ತು ಮಲ್ಟಿಬ್ರಾಂಡ್ ಮಳಿಗೆಗಳಲ್ಲಿ ಲಭ್ಯ.

ವಿವರಗಳಿಗೆ: 9731401961/
99204 667371/ 9004018771